೭
ಗದ್ಯ

# ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ

## ಅಭ್ಯಾಸ

I. ಪದಗಳ ಅರ್ಥ ತಿಳಿಯಿರಿ.

| | | |
|---|---|---|
| 1. ಬೇಡ | = | ಬೇಟೆಗಾರ, ವ್ಯಾಧ |
| 2. ಅಟ್ಟಿಸಿಕೊಂಡು | = | ಬೆನ್ನಟ್ಟು, ಹಿಂಬಾಲಿಸಿ ಓಡು |
| 3. ಕೊಂಬೆ | = | ರೆಂಬೆ |
| 4. ಪಾತಕ | = | ಪಾಪಿ |
| 5. ವಿಶ್ವಾಸಘಾತುಕ | = | ನಂಬಿಕೆ ಕಳೆದುಕೊಂಡವ |
| 6. ಅನುಕೂಲಸಿಂಧು | = | ಸೌಕರ್ಯಕ್ಕೆ ಹೊಂದುವ |
| 7. ಪ್ರಾಣ | = | ಹರಣ |
| 8. ಅಂಧ | = | ಕುರುಡ |
| 9. ಬಾಯಾರಿ | = | ದಾಹದಿಂದ, ನೀರಡಿಕೆ |
| 10. ಮೃತ್ಯು | = | ಸಾವು |
| 11. ಕೂಪ | = | ಬಾವಿ |
| 12. ಕೇಡು | = | ಕೆಟ್ಟದ್ದು |
| 13. ಗುಹೆ | = | ಗವಿ |
| 14. ಬೀಳ್ಕೊಡು | = | ಕಳುಹಿಸಿ ಕೊಡು |
| 15. ಕಾಪುರುಷ | = | ನೀಚ ಮನುಷ್ಯ |
| 16. ವಿಶ್ರಮಿಸು | = | ವಿಶ್ರಾಂತಿ ಪಡೆ |
| 17. ಫಲ | = | ಹಣ್ಣು |
| 18. ಮೋರೆ | = | ಮುಖ, ಮೊಗ |

19. ಅಮೂಲ್ಯ = ಬೆಲೆಬಾಳುವ

**II. ನಾನಾರ್ಥಗಳನ್ನು ಬರೆಯಿರಿ.**

1. ಬೇಡ = ಬೇಟೆಗಾರ, ಬೇಡ (ನಿರಾಕರಿಸುವುದು)
2. ಬಳಿ = ಬಣ್ಣವನ್ನು ಬಳಿ, ಹತ್ತಿರ
3. ಅರಸು = ರಾಜ, ಹುಡುಕುವುದು

**III. ಅರ್ಥ ತಿಳಿಯಿರಿ.**

1. ತೀರ್ಥಯಾತ್ರೆ = ಪುಣ್ಯಕ್ಷೇತ್ರಗಳಿಗೆ ಹೋಗುವುದು.

**IV. ವಿರುದ್ಧ ಪದಗಳನ್ನು ಬರೆಯಿರಿ.**

| | |
|---|---|
| 1. ವೇಗ × ನಿಧಾನ | 9. ಪ್ರಾರಂಭ × ಮುಕ್ತಾಯ |
| 2. ಬೀಳು × ಏಳು | 10. ಭಾರ × ಹಗುರ |
| 3. ಕಟ್ಟು × ಬಿಚ್ಚು | 11. ಸಬಲ × ಪ್ರಬಲ |
| 4. ಮೇಲೆ × ಕೆಳಗೆ | 12. ಉಪಕಾರ × ಅಪಕಾರ |
| 5. ಹೊರಗೆ × ಒಳಗೆ | 13. ಹಿತ × ಅಹಿತ |
| 6. ಸದುದ್ದೇಶ × ದುರುದ್ದೇಶ | 14. ಹಿರಿಯ × ಕಿರಿಯ |
| 7. ಸಹಿತ × ವಿಹಿತ | 15. ಸಾಧ್ಯ × ಅಸಾಧ್ಯ |
| 8. ಇಳಿ × ಹತ್ತು | |

**V. ಸ್ವಂತ ವಾಕ್ಯ ಮಾಡಿರಿ.**

1. ವನ – ಹುಡುಗರು ಬೇಸಿಗೆಯ ರಜಾದಿನಗಳಲ್ಲಿ ವನ ವಿಹಾರಕ್ಕೆ ಹೋಗಿದ್ದರು.
2. ಬೇಟೆ – ಏಕಲವ್ಯ ಬೇಟೆಗೆಂದು ಕಾಡಿಗೆ ಹೋಗಿದ್ದನು.
3. ಅನುಕೂಲ – ಸಾರ್ವಜನಿಕ ಅನುಕೂಲಕ್ಕಾಗಿ ಹಲವಾರು ಬಸ್ಸುಗಳನ್ನು ಕಲ್ಪಿಸಿದ್ದಾರೆ.
4. ಅಧಿಕ – ಕೊಳ್ಳುವವರ ಸಂಖ್ಯೆ ಹೆಚ್ಚಿದ್ದರೆ ಅಧಿಕ ಉತ್ಪಾದನೆ ಮಾಡಲಾಗುತ್ತದೆ.

5. ಉಪಕಾರ – ನೀರಜ ಬಡತನದಲ್ಲಿರುವವರಿಗೆ ಹಣ ನೀಡಿ ಉಪಕಾರ ಮಾಡಿದಳು.

6. ಸತ್ಕರಿಸು – ಮನೆಗೆ ಬಂದ ಅತಿಥಿಗಳನ್ನು ಅಮ್ಮ ಸತ್ಕರಿಸಿದಳು.

7. ನೆರವೇರಿಸು – ತಂದೆತಾಯಿಗಳು ಮಕ್ಕಳ ಯಶಸ್ಸಿಗೆ ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನೆರವೇರಿಸುತ್ತಾರೆ.

**VI. ಹೊಂದಿಸಿ ಬರೆಯಿರಿ.**

| ಅ | ಆ |
|---|---|
| 1. ತಂಬಿಗೆ | ಈ ಬಳ್ಳಿ |
| 2. ಚಪಲಕ | ಉ. ಕಪಿ |
| 3. ತೀರ್ಥ | ಅ. ಯಾತ್ರೆ |
| 4. ಮೃತ್ಯು | ಆ. ಕೂಪ |
| 5. ಚಿಂತೆ | ಇ. ನಿಶ್ಚಿಂತೆ |

**VII. ಬಿಟ್ಟ ಸ್ಥಳಗಳಲ್ಲಿ ಸರಿಯಾದ ಪದ ಬರೆಯಿರಿ.**

1. ಕಾಮ್ಯಕ ಎಂಬ ವನದಲ್ಲಿ **ಕಥಕನೆಂಬ** ಬೇಡನಿದ್ದನು.
2. ಕಥಕನೆಂಬ ಬೇಡನು ವೇಗದಿಂದ ಬಂದು **ದೊಡ್ಡಮರವನ್ನು** ಹತ್ತತೊಡಗಿದ.
3. ಶಿವಭೂತಿಯೆಂಬ ಬ್ರಾಹ್ಮಣನು **ಬಾಯಾರಿ** ಬಾವಿಯ ಬಳಿ ಬಂದನು.
4. **ನೀಚನಿಗೆ** ಎಷ್ಟೇ ಉಪಕಾರ ಮಾಡಿದರೂ **ಒಳ್ಳೆಯದನ್ನು** ಮಾಡುವವನಲ್ಲ.
5. ಕಪಿಯು **ಬದರಿಕಾಶ್ರಮದ** ವನದಲ್ಲಿರುವೆ.
6. ಇತ್ತ ಕಪಿ ಬೇಡನಿಗೆ ತುಂಬಾ ಹಸಿವಾಗಿರಬೇಕೆಂದು **ಹಣ್ಣುಹಂಪಲು**ಗಳನ್ನು ತರಲು ಹೊರಟಿತು.

**VIII. ಕೆಳಗಿನ ಪದಗಳನ್ನು ಸ್ಪಷ್ಟವಾಗಿ ಉಚ್ಚರಿಸಿರಿ (ಮೌಖಿಕ ಅಭ್ಯಾಸ)**

ಒಳಗೊಳಗೆ, ಹರುಷ, ಹಾಲಾಹಲ, ಹೊಳೆ, ಲಲನೆ, ಬಳಪದ ಕಲ್ಲು, ಹುರುಪು, ಪರಿಧಿ, ಅಂಕಣ, ತೆಂಕಣ, ಪುರಾಣ, ಬ್ರಾಹ್ಮಣ, ಪ್ರಾಣ, ಬಳ್ಳಿ, ಹಳ್ಳಿ, ಪಣ, ಪಟ್ಟಣ, ಲಕ್ಷಣ, ನಕಲು, ಕರಣ, ಕಾನನ, ಆಕಳು, ಅರಿವು, ಆದರ, ಅರ್ಪಣೆ, ಆಕರ್ಷಣೆ, ಆವೃತ

IX. ಸಂಧಿ ಬಿಡಿಸಿ ಹೆಸರಿಸಿ.

1. ಕಿವಿಗೊಟ್ಟು = ಕಿವಿ + ಕೊಟ್ಟು = ಆದೇಶ ಸಂಧಿ
2. ವೇಗದಿಂದ = ವೇಗ + ಇಂದ = ಆದೇಶ ಸಂಧಿ
3. ಕೋಪದಿಂದ = ಕೋಪ + ಇಂಡ = ಆದೇಶ ಸಂಧಿ
4. ಬಳ್ಳಿಯಿಂದ = ಬಳ್ಳಿ + ಇಂದ = ಯಕಾರಾಗಮ ಸಂಧಿ
5. ಅಧಿಕವಾಗು = ಅಧಿಕ + ವಾಗು = ವಕಾರಾಗಮ ಸಂಧಿ
6. ಹಾಲೆರೆ = ಹಾಲು + ಎರೆ = ಲೋಪ ಸಂಧಿ
7. ಕೇಡಾಗು = ಕೇಡು + ಆಗು = ಲೋಪಸಂಧಿ

X. ಯಾರು ಯಾರಿಗೆ ಹೇಳಿದರು?

1. "ಎಲೆ ಕಪಿಯೇ! ನೀನು ಮನುಷ್ಯನನ್ನು ಹತ್ತಿರ ಸೇರಿಸಿಕೊಂಡು ನನಗೆ ಸಿಗದಂತೆ ದೂರಗೊಳಿಸಬೇಡ."

   (ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಹುಲಿ ಕಪಿಗೆ ಹೇಳಿದ ಮಾತು.

2. "ನೀನು ಈ ಬಾವಿಯಲ್ಲಿ ಬಿದ್ದ ಕಾರಣವೇನು?"

   (ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಬ್ರಾಹ್ಮಣನು ಹುಲಿಯನ್ನು ಕೇಳಿದನು.

3. "ನಿಮ್ಮ ಕೃಪೆಯಿಂದ ಮೃತ್ಯಕೂಪದಿಂದ ಪಾರಾಗಿ ಬದುಕಿದೆ."

   (ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಹುಲಿ ಕೃತಜ್ಞತೆಯಿಂದ ಬ್ರಾಹ್ಮಣನಿಗೆ ಹೇಳಿತು.

4. "ಹಾಗಾದರೆ ಬೇಡನೊಬ್ಬನನ್ನು ತೆಗೆಯಬೇಡಿರಿ."

   (ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಸರ್ಪವು ಬ್ರಾಹ್ಮಣನಿಗೆ ಹೇಳಿದ ಮಾತು.

5. "ನಿಮಗೇನಾದರೂ ಕಷ್ಟ ಬಂದಲ್ಲಿ ನನ್ನನ್ನು ನೆನೆದ ಕೂಡಲೇ ಬಂದು ತಮ್ಮ ಸೇವೆ ಮಾಡಿಹೋಗುವೆನೆಂದು ಹೇಳಿ ಹೋಯಿತು."

(ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಸರ್ಪವು ಬ್ರಾಹ್ಮಣನಿಗೆ ಹೇಳಿದ ಮಾತು.

6. "ದೇವಾ! ನೀವು ಧರಿಸುವ ಆಭರಣಗಳನ್ನು ತಂದ ಒಬ್ಬ ಬ್ರಾಹ್ಮಣನು ನನ್ನ ಮನೆಯಲ್ಲಿರುವನು."

(ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.)ಈ ಮಾತನ್ನು ಬೇಡ ಅರಸನಿಗೆ ಹೇಳಿದ ಮಾತು.

7. "ಅರಸನ ಹಿರಿಯ ಮಗನನ್ನು ಈಗಲೇ ಹೋಗಿ ಕೊಂದುಬಿಡುವೆನು."

(ಈ ಮೇಲಿನ ವಾಕ್ಯವನ್ನು 'ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆ' ಎಂಬ ಪಾಠದಿಂದ ಆರಿಸಲಾಗಿದೆ.) ಈ ಮಾತನ್ನು ಕಪಿ ಹುಲಿಗೆ ಹೇಳಿದ ಮಾತು.

**XI. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**1. ಹುಲಿಯು ಯಾರನ್ನು ಅಟ್ಟಿಸಿಕೊಂಡು ಹೋಯಿತು?**

ಉ: ಕಥಕನೆಂಬ ಬೇಡನನ್ನು ಹುಲಿಯು ಅಟ್ಟಿಸಿಕೊಂಡು ಹೋಯಿತು.

**2. ಮೊದಲು ಬಾವಿಗೆ ಬಿದ್ದವರು ಯಾರು?**

ಉ: ಮೊದಲು ಬಾವಿಗೆ ಬಿದ್ದವರು ಕಂಬಳಕನೆಂಬ ಬೇಡ.

**3. ಹುಲಿಯು ಬಾವಿಯಲ್ಲಿ ಬಿದ್ದದ್ದು ಹೇಗೆ?**

ಉ: ಬೇಡನನ್ನು ಅಟ್ಟಿಸಿಕೊಂಡ ಬಂದ ಹುಲಿ. ಕೋಪಾಂಧನಾಗಿ ಬಾವಿಯಲ್ಲಿ ಬಿದ್ದಿತು.

**4. ಕಪಿಯು ಕೂಪದಲ್ಲಿ ಬೀಳಲು ಕಾರಣವೇನು?**

ಉ: ಚಪಲಕನೆಂಬ ಕಪಿಯು ನೀರು ಕುಡಿಯಬೇಕೆಂದು ಬಾವಿಯಬಳಿಗೆ ಬಂದು, ಜೋತಾಡುತ್ತಿದ್ದ ಸರ್ಪವನ್ನು ಬಳ್ಳಿಯೆಂದು ತಿಳಿದು ಹಿಡಿದು ಇಳಿಯಲು ಹೋಗಿ ಬಾವಿಯಲ್ಲಿ ಬಿದ್ದಿತು.

5. ಸರ್ಪವು ಬಾವಿಯೊಳಗೆ ಸೇರಿದ ರೀತಿ ಹೇಗೆ?

ಉ: ಬಾವಿಯ ದಡದಲ್ಲಿ ಜೋತಾಡುತ್ತಿದ್ದ ಸರ್ಪವನ್ನು ಬಳ್ಳಿಯೆಂದು ತಿಳಿದ ಕಪಿಯು ಹಿಡಿದು ಇಳಿಯಲು ಹೋಗಿ ಬಾವಿಯಲ್ಲಿ ಸರ್ಪದ ಸಹಿತ ಬಿದ್ದಿತು. ಇದರಿಂದ ಸರ್ಪವು ಬಾವಿಯೊಳಗೆ ಸೇರಿತು.

6. ಶಿವಭೂತಿಯು ಬಾವಿಗೆ ಇಳಿ ಬಿಟ್ಟಿದ್ದ ತಂಬಿಗೆಯನ್ನು ಮೊದಲು ಹಿಡಿದ ಪ್ರಾಣಿ ಯಾವುದು?

ಉ: ಶಿವಭೂತಿಯು ಬಾವಿಗೆ ಇಳಿಬಿಟ್ಟಿದ್ದ ತಂಬಿಗೆಯನ್ನು ಹುಲಿಯು ಮೊದಲು ಹಿಡಿಯಿತು.

7. ಹುಲಿಯು ಯಾರನ್ನು ಬಾವಿಯಿಂದ ಹೊರಗೆ ತೆಗೆಯಬಾರದೆಂದಿತು?

ಉ: ಹುಲಿಯು ಬೇಡನನ್ನು ಬಾವಿಯಿಂದ ಹೊರಗೆ ತೆಗೆಯಬಾರದೆಂದಿತು.

8. ಕಪಿಯು ಯಾವ ವನದಲ್ಲಿ ವಾಸವಾಗಿತ್ತು?

ಉ: ಕಪಿಯು ಬದರಿಕಾಶ್ರಮದ ವನದಲ್ಲಿ ವಾಸವಾಗಿತ್ತು.

9. ಬೇಡನು ತಾನು ಯಾವ ನಗರದಲ್ಲಿ ವಾಸವಾಗಿರುವುದಾಗಿ ಹೇಳಿದನು?

ಉ: ಬೇಡನು ಪದ್ಮನಗರದಲ್ಲಿ ವಾಸವಾಗಿರುವೆ ಎಂದು ಹೇಳಿದನು.

10. ಹುಲಿಯು ಶಿವಭೂತಿಯನ್ನು ಹೇಗೆ ಸತ್ಕರಿಸಿತು?

ಉ: ಹುಲಿಯು ತನ್ನಲ್ಲಿರುವ ಬೆಲೆಬಾಳುವ ಹಾರ, ಉಂಗುರ, ಕಿರೀಟಾದಿ ಆಭರಣಗಳನ್ನೂ ಕೊಟ್ಟು ಶಿವಭೂತಿಯನ್ನು ಸತ್ಕರಿಸಿತು.

11. ಕಪಿಯು ಶಿವಭೂತಿಗೆ ಮಾಡಿದ ಅತಿಥಿ ಸತ್ಕಾರವೇನು?

ಉ: ಕಪಿ ಶಿವಭೂತಿಯನ್ನು ಕಂಡು ಪ್ರೀತಿಯಿಂದ ನಮಸ್ಕರಿಸಿ. ಹಲಸು ಮಾವು ನೇರಳೆ, ಕಿತ್ತಳೆ ಬಾಳೆ ಮೊದಲಾದ ಹಣ್ಣುಗಳನ್ನು ಕೊಟ್ಟು ಸತ್ಕರಿಸಿತು.

12. ಕಂಬಳಕನು ಪೆಚ್ಚುಮೋರೆಮಾಡಿ ನಿಂತುಕೊಂಡದ್ದು ಏಕೆ?

ಉ: ಶಿವಭೂತಿಯನ್ನು ಕಂಡ ಕಂಬಳಬೇಡ 'ತಾವು ಬಂದಿರುವಿರಿ, ತಮ್ಮನ್ನು ಸತ್ಕರಿಸಲು ನನ್ನ ಬಳಿ ಏನೂ ಇಲ್ಲ' ಎಂದು ಪೆಚ್ಚುಮೋರೆ ಮಾಡಿಕೊಂಡು ನಿಂತನು.

13. ಶಿವಭೂತಿಯು ಸೆರೆಮನೆಯಲ್ಲಿ ಯಾರನ್ನು ಸ್ಮರಿಸಿದನು?

ಉ: ಶಿವಭೂತಿಯು ಸೆರೆಮನೆಯಲ್ಲಿದ್ದಾಗ ಹಾವನ್ನು ಸ್ಮರಿಸಿಕೊಂಡನು.

XII. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಐದು ವಾಕ್ಯಗಳಲ್ಲಿ ಉತ್ತರಿಸಿ.

1. ಮರವೇರುತ್ತಿದ್ದ ಬೇಡನನ್ನು ಕಂಡು ಹುಲಿ ಕಪಿಗೆ ಹೇಳಿದ ಮಾತುಗಳೇನು?

ಉ: ಮರವೇರುತ್ತಿದ್ದ ಕಥಕನೆಂಬ ಬೇಡನನ್ನು ಕಂಡು ಹುಲಿ ಎಲೆ ಕಪಿಯೇ! ನೀನು ಮನುಷ್ಯನನ್ನು ಹತ್ತಿರ ಸೇರಿಸಿಕೊಂಡು ನನಗೆ ಸಿಗದಂತೆ ದೂರಗೊಳಿಸಬೇಡ. ಇವನು ಮಹಾಪಾತಕನು, ವಿಶ್ವಾಸ ಘಾತುಕನು, ಅನುಕೂಲಸಿಂಧು ಸಮಯ ಬಂದಲ್ಲಿ ನಿನಗೂ ಕೇಡನ್ನುಂಟುಮಾಡಿದನು. 'ಆದ್ದರಿಂದ ಇವನನ್ನು ಕೆಳಕ್ಕೆ ಬೀಳಿಸು, ಕೊಂದು ತಿಂದು ಬಿಡುವೆ' ಎಂದು ಹೇಳಿತು.

2. ಕಪಿಯು ಬಾವಿಯಲ್ಲಿ ಬಿದ್ದ ರೀತಿ ಹೇಗಿತ್ತು?

ಉ: ಒಂದು ದೊಡ್ಡ ಕಾಡಿನಲ್ಲಿ ಕಂಬಳಕನೆಂಬ ಬೇಡನನ್ನು ಒಂದು ಹುಲಿಯು ಅಟ್ಟಿಸಿಕೊಂಡು ಬರಲು ಪ್ರಾಣ ಭಯದಿಂದ ದಿಕ್ಕುಗಾಣದೆ ಒಂದು ಹಳೆಯ ಬಾವಿಯಲ್ಲಿ ಬಿದ್ದನು. ಆ ಹುಲಿಯೂ ಕೊಪಾಂಧನಾಗಿ ತಾನೂ ಅದೇ ಬಾವಿಯಲ್ಲಿ ಬಿದ್ದಿತು. ಅಷ್ಟರಲ್ಲಿ ಚಪಲಕನೆಂಬ ಒಂದು ಕಪಿ ನೀರು ಕುಡಿಯ ಬೇಕೆಂದು ಆ ಬಾವಿಯ ಬಳಿಗೆ ಬಂದಿತು. ಆ ಸಂದರ್ಭದಲ್ಲಿ ದಾರಿ ತೋರದೆ ಬಾವಿಯ ದಡವನ್ನು ಹಿಡಿದುಕೊಂಡು ಜೋತಾಡುತ್ತಿದ್ದ ಸರ್ಪವನ್ನು ಬಳ್ಳಿಯೆಂದು ತಿಳಿಯದೆ ಹಿಡಿದು ಇಳಿಯಲು ಹೋಗಿ ಸರ್ಪ ಸಹಿತವಾಗಿ ಕಪಿ ಬಾವಿಯಲ್ಲಿ ಬಿದ್ದಿತು.

3. ಶಿವಭೂತಿಯು ಹುಲಿಯನ್ನು ಮೇಲಕ್ಕೆ ತಂದದ್ದು ಹೇಗೆ?

ಉ: ತೀರ್ಥಯಾತ್ರಾರ್ಥಿಯಾದ ಶಿವಭೂತಿಯೆಂದ ಬ್ರಾಹ್ಮಣನು ಬಾಯಾರಿ ಬಾವಿಯ ಬಳಿ ಬಂದನು. ತನ್ನ ಕೈಯಲ್ಲಿದ್ದ ತಂಬಿಗೆಯನ್ನು ಬಳ್ಳಿಯಿಂದ ಕಟ್ಟಿ ನೀರಿನಲ್ಲಿ ಬಿಟ್ಟನು. ಅದನ್ನು ಹುಲಿ ಹಿಡಿಯಿತು. ಶಿವಭೂತಿಗೆ ಮೇಲಕ್ಕೆ ಎಳೆಯುವಾಗ ಭಾರವೆನಿಸಿದರೂ ಅದನ್ನು ನೋಡೋಣವೆಂದು ಬಲವಾಗಿ ಹಿಡಿದು ಮೇಲಕ್ಕೆ ತೆಗೆದನು. ಆಗ ಹುಲಿ ಮೇಲಕ್ಕೇ ಬಂದಿತು.

4. ಕಪಿಯು ಎಲ್ಲಿ ವಾಸವಾಗಿತ್ತು? ಅದು ಶಿವಭೂತಿಗೆ ಹೇಳಿದ ಮಾತುಗಳೇನು?

ಉ: ಬ್ರಾಹ್ಮಣನು ಕಪಿಯನ್ನು ಬಾವಿಯಿಂದ ತೆಗೆದ ಮೇಲೆ ಕಪಿಯು ನಮಸ್ಕರಿಸಿ ನಿಮ್ಮ ಪ್ರಸಾದದಿಂದ ನನಗೆ ಪುನರ್ಜನ್ಮವಾಯಿತು. ಬದರಿಕಾಶ್ರಮದ ವನದಲ್ಲಿರುವೆ. ಅಲ್ಲಿಗೆಂದಾದರೂ ತಾವು ಬಂದಾಗ ನನ್ನಿಂದಾದ ಉಪಕಾರ ಮಾಡುವೆ ಎಂದು ಹೇಳಿತು.

5. ಸರ್ಪವು ಶಿವಭೂತಿಗೆ ಹೇಳಿದ ಕೃತಜ್ಞತೆಯ ಮಾತುಗಳೇನು?

ಉ: ಬಾವಿಯಿಂದ ಕಪಿಯೊಂದಿಗೆ ಸರ್ಪವೂ ಮೇಲಕ್ಕೆ ಬಂದು ಬ್ರಾಹ್ಮಣ ನಿನಗೇನಾದರೂ ಕಷ್ಟ ಬಂದಲ್ಲಿ ನನ್ನನ್ನು ನೆನೆದ ಕೂಡಲೇ ಬಂದು ತಮ್ಮ ಸೇವೆ ಮಾಡಿ ಹೋಗುವೆ ಎಂದು ಹೇಳಿ ಹೋಯಿತು.

**6. ಅರಸನು ಶಿವಭೂತಿಯನ್ನು ಸೆರೆಮನೆಗೆ ಕಳುಹಿಸಲು ಕಾರಣವೇನು?**

ಉ: ಶಿವಭೂತಿಯು ಹುಲಿ, ಕಪಿ ನೀಡಿದ ಸತ್ಕಾರದೊಂದಿಗೆ ಬೇಡನಾದ ಕಂಬಳನ ಮನೆಗೆ ಬಂದನು. ಆಗ ಶಿವಭೂತಿಯ ಬಳಿ ಇದ್ದ ಬೆಲೆಬಾಳುವ ಆಭರಣಗಳನ್ನು ಕಂಡು ಆ ನಗರವನ್ನು ಆಳುವ ಅರಸನಲ್ಲಿಗೆ ಹೋಗಿ 'ನೀವು ಧರಿಸುವ ಆಭರಣಗಳನ್ನು ತಂದ ಒಬ್ಬ ಬ್ರಾಹ್ಮಣ ನನ್ನ ಮನೆಯಲ್ಲಿರುವನು' ಎಂದು ದೂರಿತ್ತನು.

**7. ಅರಸರನ ಮಗನು ಬದುಕಿದ್ದು ಹೇಗೆ?**

ಉ: ಹಾವು ಅರಸನ ಮಗನನ್ನು ಕಚ್ಚಿತು. ಕಚ್ಚಿದ ರಾಜಕುಮಾರನನ್ನು ಬದುಕಿಸಲು ಅನೇಕ ಗಾರುಡಿಗರು ಬಂದು ತಮ್ಮ ತಮ್ಮ ತಿಳಿವಳಿಕೆಗನುಗುಣವಾಗಿ ವೈದ್ಯ ಮಾಡಿದರೂ ಆಗಲಿಲ್ಲ. ಆಗ ಅರಸ ತನ್ನ ಮಗನನ್ನು ಎಬ್ಬಿಸಿದವನಿಗೆ ಬೇಡಿದುದನ್ನು ನೀಡುವೆನು ಎಂದು ಡಂಗುರ ಸಾರಿಸಿದನು. ಅದನ್ನು ತಿಳಿದ ಶಿವಭೂತಿ ತಾನು ಬದುಕಿಸುವೆನೆಂದು ಬಂದು ತನ್ನ ಬಳಿಯಿದ್ದ ನೀರನ್ನು ಅಭಿಮಂತ್ರಿಸಿ ರಾಜಕುಮಾರನ ಮೇಲೆ ಪ್ರೋಕ್ಷಿಸಿದನು. ರಾಜಕುಮಾರ ಛೋಂಕನೆ ಎದ್ದು ಕುಳಿತನು.

**8. ಶಿವಭೂತಿಗೆ ರಾಜಮನ್ನಣೆ ದೊರಕಿದ್ದು ಹೇಗೆ?**

ಉ: ಶಿವಭೂತಿ ತನ್ನ ಬಳಿಯಿದ್ದ ನೀರನ್ನು ಅಭಿಮಂತ್ರಿಸಿ ರಾಜಕುಮಾರನನ್ನು ಬದುಕಿಸಿದನು. ಆಗ ರಾಜ ತುಂಬಾ ಸಂತೋಷಪಟ್ಟು ತನ್ನೆಲ್ಲಾ ಐಶ್ವರ್ಯವನ್ನು ಶಿವಭೂತಿಗೆ ಕೊಟ್ಟು, ಬೇಡನಿಂದ ಒದಗಿದ ಅವಸ್ಥೆಯನ್ನೂ ತಿಳಿದು, ಆ ಬೇಡನನ್ನು ಯಮಪುರಿಗೆ ಅಟ್ಟಿದನು.

**9. ಈ ಕಥೆಯಲ್ಲಿ ನೀವು ಕಲಿಯುವ ನೀತಿಯೇನು? ವಿವರಿಸಿ.**

ಉ: ಉಪಕಾರವಂ ಮಾಡಿ ಕೆಟ್ಟ ಕಪಿಯ ಕಥೆಯಿಂದ ಉಪಕಾರ ಮಾಡಿದವನಿಗೆ ಎಂದೂ ಅಪಕಾರ ಎಸೆಗಬಾರದು. ಕೀಳು ಮನುಷ್ಯನಿಗೆ ಎಷ್ಟೇ, ಹೇಗೆ ಉಪಕಾರ ಮಾಡಿದರೂ ಸ್ವಬುದ್ಧಿ ಹೋಗುವುದಿಲ್ಲ. ಆದರೂ ಕೆಟ್ಟದ್ದನ್ನು ಎಸೆಗಬಾರದು. ಒಳ್ಳೆಯದನ್ನು ಮಾಡುವವನಿಗೆ ದೇವರು ಯಾವುದೋ ಒಂದರ ಮೂಲಕ ಒಳ್ಳೆಯದನ್ನೇ ಅನುಗ್ರಹಿಸುತ್ತಾನೆಂಬ ನೀತಿ ವ್ಯಕ್ತವಾಗುತ್ತದೆ.

**10. ಈ ಕಥೆಯಲ್ಲಿ ನೀವು ಕಲಿಯುವ ನೀತಿಯೇನು? ವಿವರಿಸಿ.**

ಉ: ಅರಸನಲ್ಲಿಗೆ ಹೋದವನು ಬೇಡ. ಆತನು ಶಿವಭೂತಿ ಎಂಬ ಬ್ರಾಹ್ಮಣ ತನ್ನ ಬಳಿಯಿದ್ದ ಅಮೂಲ್ಯ ಆಭರಣಗಳನ್ನು ತೋರಿಸಿದನು. ಆಗ ಬೇಡ ಆ ನಗರವನ್ನು ಆಳುವ ಅರಸನಲ್ಲಿಗೆ ಹೋಗಿ ದೂರಿತ್ತನು. ಅರಸನು ತನ್ನ ಸೇನಾಧಿಪತಿಗೆ ಆಜ್ಞಾಪಿಸಿ ಬ್ರಾಹ್ಮಣನನ್ನು ಕರೆಸಿ ಆತನ ಬಳಿಯಲ್ಲಿದ್ದ ಆಭರಣಗಳನ್ನೆಲ್ಲಾ ತೆಗೆದುಕೊಂಡು ಅವನನ್ನು ಸೆರೆಮನೆಯಲ್ಲಿಟ್ಟನು. ಬೇಡ ತನಗೆ ಒಮ್ಮೆ ಬ್ರಾಹ್ಮಣ ಹಿತವನ್ನುಂಟು ಮಾಡಿದ್ದ ಎಂಬುದನ್ನು ಯೋಚಿಸದೆ ಅಹಿತವನ್ನು ಎಣಿಸಿದ.

* * *